ಮಾಡಿದ್ದಾರೆ. ಅದನ್ನು ಕ್ಲಾರಿಫೈ ಮಾಡಬೇಕಾಗುತ್ತದೆ. ಇವೆಲ್ಲಾ ಆಪಾದನೆಯನ್ನು ಇಟ್ಟುಕೊಂಡು ಇದರಲ್ಲಿ ಮುಂದುವರೆಯುವುದು ಸರಿಯಾಗುವುದಿಲ್ಲವೆಂದು ಹೇಳುತ್ತಾ, ಹೆಚ್ಚು ವಿಷಯಗಳನ್ನು ಈಗಾಗಲೇ ನನ್ನ ಸಹೋದ್ಯೋಗಿ ಸ್ನೇಹಿತರು ಎಲ್ಲಾ ಮಾತನಾಡಿದ್ದಾರೆ ಹೀಗಾಗಿ ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಆದರೆ ಇದರಲ್ಲಿ ಇತ್ಯರ್ಥವಾಗಬೇಕಾಗುತ್ತದೆ, ಇದು ಸರ್ಕಾರ ಬಂದಿರುವುದು ಕಳೆದ 4–5 ತಿಂಗಳುಗಳ ಹಿಂದೆ, ಒಂದರ ಮೇಲೊಂದು ಆಪಾದನೆ ಬರುವಾಗ, ಬಿಎಂಐಸಿ ವಿಚಾರದಲ್ಲಿ ಸರ್ಕಾರದ ಒಂದು ಅಂಗ ಬಿಲ್‌ನ್ನು ತರಬೇಕು ಎಂದು ಹೇಳಿದರೆ ಇನ್ನೊಬ್ಬರು ಬೇಡ ಎಂದಿದ್ದರಿಂದ ಅದು ನಿಂತು ಹೋಯಿತು. ಅದನ್ನು ತಂದಿದ್ದರೆ ನಾವು ಈಗಲೂ ಕೂಡ hypothetical ಆಗಿ ಚರ್ಚೆ ಮಾಡುವುದಕ್ಕಾಗಿ, ತಂದಿದ್ದರೆ ಚರ್ಚೆ ಮಾಡುವುದಕ್ಕೆ ನನಗೆ ಬಹಳ ಆಸೆ ಇತ್ತು. ಆದರಿಂದ ಅದರ ಆಗುಹೋಗುಗಳ ಬಗ್ಗೆ ಚರ್ಚೆ ಮಾಡಬೇಕೆಂದು ಇತ್ತು. ನಮ್ಮಲ್ಲಿ ಭಿನ್ನಾಭಿಪ್ರಾಯ ಇದೆ ಎಂಬುದನ್ನು ಮಾನ್ಯ ಪುಟ್ಟೇಗೌಡರು ನೇರವಾಗಿ ಒಪ್ಪಿಕೊಂಡಿದ್ದಾರೆ. ಆದರೆ, ಮಾನ್ಯ ಯಡಿಯೂರಪ್ಪನವರಿಗೆ ಕೇಳಿದ್ದಕ್ಕೆ ನೆನ್ನೆ ದಿವಸ ನಡೆದ ನಮ್ಮ ಸಭೆಗೆ ತಾವು ಬರಬೇಕಾಗಿತ್ತೆಂದು ಹೇಳಿದರು. ಇಂಥ ಸಂದರ್ಭದಲ್ಲಿ ನಾವು ಅಂಥ ಸಭೆಗೆ ಬರತಕ್ಕಂಥದ್ದು ಸರಿಯಾಗುವುದಿಲ್ಲ. ಏಕೆಂದರೆ, ನಿಮ್ಮ ನಿಮ್ಮ ಭಿನ್ನಾಭಿಪ್ರಾಯಗಳ ಬಗ್ಗೆ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ನಾವು ಅಲ್ಲಿಗೆ ಬರತಕ್ಕಂಥದ್ದು ಸರಿಯಲ್ಲ. ಏಕೆಂದರೆ, ನಮ್ಮಿಂದ ಆ ಸುದ್ದಿ ಹೊರಗಡೆ ಹೋಯಿತೆಂಬ ಅಪವಾದಕ್ಕೆ ನಾವು ಗುರಿ ಆಗಬಾರದು. ಆದರೆ, ನಿಮ್ಮ ಭಿನ್ನಾಭಿಪ್ರಾಯದಿಂದಾಗಿ ನಮಗೇನೂ ತೊಂದರೆಯಿಲ್ಲ ಎನ್ನುವಂಥದ್ದು ಇರಬಾರದು. ನಿಮ್ಮಗಳ ಭಿನ್ನಾಭಿಪ್ರಾಯದಿಂದ ಆಡಳಿತದ ಮೇಲೆ ಎಷ್ಟು ಪರಿಣಾಮ ಬೀರುತ್ತದೆಂಬುದು ಮತ್ತು ರಾಜ್ಯಕ್ಕೆ ಇದರಿಂದ ಎಷ್ಟು ತೊಂದರೆ ಆಗುತ್ತದೆಂಬುದು ಹಾಗೂ ಸರ್ಕಾರದ ಬೊಕ್ಕಸಕ್ಕೆ ಎಷ್ಟು ನಷ್ಟವಾಗುತ್ತದೆಂಬುದನ್ನು ನೋಡಬೇಕಾಗುತ್ತದೆ. ಏಕೆಂದರೆ ಎಲ್ಲರೂ ಸುಮ್ಮನೆ ಕುಳಿತುಕೊಂಡರೆ ನಿಮ್ಮ ರೆವಿನ್ಯೂ ರೆಸಿಟ್ಸ್ ಕಡಿಮೆ ಆಗುತ್ತದೆ. ಹಾಗೆಯೇ ನಿಮ್ಮ ಅಭಿವೃದ್ಧಿ ಕಾಮಗಾರಿಗಳೂ ಕೂಡ ಕಡಿಮೆಯಾಗುತ್ತವೆ. ಆದ್ದರಿಂದ ಅವರನ್ನು ಮುಂದುವರಿಸಬೇಕೇ ಅಥವಾ ಬೇಡವೇ ಎನ್ನತಕ್ಕಂಥದರ ಬಗ್ಗೆ ಸರ್ಕಾರ ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆಂದು ತಮ್ಮ ಮೂಲಕ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

3. ಪ್ರಕಟಣೆ

ಉಪಾಧ್ಯಕ್ಷರು : ಲೋಕೋಪಯೋಗಿ ಮತ್ತು ಇಂಧನ ಸಚಿವರಾಗಿರತಕ್ಕಂಥ ಮಾನ್ಯ ಹೆಚ್.ಡಿ. ರೇವಣ್ಣನವರು ವಿಧಾನ ಮಂಡಲದ ಮಾನ್ಯ ಸದಸ್ಯರುಗಳ

ಗೌರವಾರ್ಥ ಈ ದಿನ ಮಧ್ಯಾಹ್ನ 2.30ಕ್ಕೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಿರುವ ಭೋಜನ ಕೂಟಕ್ಕೆ ತಮ್ಮೆಲ್ಲರನ್ನೂ ಆಹ್ವಾನಿಸಿರುತ್ತಾರೆ. ತಾವುಗಳು ದಯಮಾಡಿ ಭಾಗವಹಿಸಬೇಕೆಂದು ಈ ಮೂಲಕ ಕೋರಲಾಗಿದೆ.

ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 32 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು.)

ಸದನವು ಮಧ್ಯಾಹ್ನ 3.28 ಗಂಟೆಗೆ ಪ್ರಾರಂಭವಾಯಿತು.

(ಸಭಾಧ್ಯಕ್ಷರು

(ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

(1) **ವಿಷಯ:** ಮುಂಬೈನಲ್ಲಿ ಆಗಿರುವ ಬಾಂಬ್ ಸರಣಿ ಸ್ಫೋಟದಿಂದ ರಾಜ್ಯದಲ್ಲಿ ಕಟ್ಟೆಚ್ಚರ ವಹಿಸುವ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ನಾನು ಬೆಳಿಗ್ಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೆನು. ಕೇಂದ್ರ ಸರ್ಕಾರದ ಗೃಹ ಇಲಾಖೆಯಿಂದ ರಾಜ್ಯ ಸರ್ಕಾರಕ್ಕೆ ಒಂದು ಮಾಹಿತಿಯನ್ನು ಕಳುಹಿಸಿದ್ದಾರೆ. ಬಾಂಬೆಯಲ್ಲಿ ಬಾಂಬ್ ಬ್ಲಾಸ್ಟ್ ಆಗಿರುವ ಹಿನ್ನೆಲೆಯಲ್ಲಿ ಅಲ್ಲಿರುವ ಅಪರಾಧಿಗಳೆಲ್ಲರೂ ಬೆಂಗಳೂರು ಕಡೆಗೆ ಹೊರಟಿದ್ದಾರೆಂದು ಮಾಹಿತಿ ಬಂದಿದೆ. ಹೈದರಾಬಾದಿನ ಮುಖಾಂತರ ಗುಲ್ಬರ್ಗಾ, ಬೀದರ್ ಕಡೆಯಿಂದ ಬೆಂಗಳೂರಿಗೆ ನುಸುಳುವ ಅವಕಾಶವಿದೆಯೆಂದು ಕೇಂದ್ರ ಸರ್ಕಾರದ ಗೃಹ ಇಲಾಖೆಯಿಂದ ಮಾಹಿತಿಯು ಬಂದಿದೆ. ಇದರ ಬಗ್ಗೆ ಎರಡೂ ಮೂರು ಪತ್ರಿಕೆಗಳಲ್ಲಿ ಕೂಡ ಪ್ರಕಟವಾಗಿದೆ. ನಾನು ಯಾಕೆ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ, ಹಿಂದೆ ಐ.ಎಸ್.ಐ. ಮೇಲೆ ಧಾಳಿ ನಡೆದಂತಹ ಸಂದರ್ಭದಲ್ಲಿ ಮೂರು ದಿವಸಗಳ ಮೊದಲೇ ಕೇಂದ್ರ ಸರ್ಕಾರದ ಗೃಹ ಇಲಾಖೆಯಿಂದ ರಾಜ್ಯ ಸರ್ಕಾರಕ್ಕೆ ಮಾಹಿತಿ ಬಂದಿದ್ದರೂ ಸಹ ಏನೂ ಕ್ರಮ ತೆಗೆದುಕೊಂಡಿಲ್ಲ ಎನ್ನುವ ಟೀಕೆ ಬೇರೆ ಆಗ ಬಂದಿತ್ತು. ಈಗಲೂ ಕೂಡ ಅದೇ ರೀತಿಯಾದ ಮಾಹಿತಿ ರಾಜ್ಯ ಸರ್ಕಾರಕ್ಕೆ ಬಂದಿದೆ, ಅದರ ಬಗ್ಗೆ ಸರ್ಕಾರದ ಹತ್ತಿರ ಏನು ಮಾಹಿತಿ ಇದೆ? ಈ ಹಿನ್ನೆಲೆಯಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಕೇಂದ್ರ ಸರ್ಕಾರದ ಗೃಹ ಇಲಾಖೆಯೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದಾರೆಯೇ?